# ಸ್ಫೋಟಕ್ಕೆ ಸಜ್ಜಾಗಿರುವ 'ಬಾಂಬ್'

'ಪ್ಲಾಸ್ಟಿಕ್ ಕಸ ಎಂಬುದು ಭಾರತದಲ್ಲಿ ಸ್ಫೋಟಿಸಲು ಸಜ್ಜಾಗಿರುವ ಬಾಂಬ್ ಆಗಿದೆ' ಎಂಬಂತಹ ಸುಪ್ರೀಂಕೋರ್ಟ್‌ನ ಮಾತು ನಮಗೆ ಎಚ್ಚರಿಕೆಯ ಗಂಟೆಯಾಗಬೇಕಿದೆ.

'ಪ್ಲಾಸ್ಟಿಕ್ ಕಸ ಎಂಬುದು ಭಾರತದಲ್ಲಿ ಸ್ಫೋಟಿಸಲು ಅಣಿಯಾಗಿರುವ ಬಾಂಬ್ ಆಗಿದೆ.'– ಇಂತಹದೊಂದು ತೀವ್ರ ಎಚ್ಚರಿಕೆಯನ್ನು ನೀಡಿರುವುದು ಸುಪ್ರೀಂಕೋರ್ಟ್. ದಿನನಿತ್ಯ ಸೃಷ್ಟಿಯಾಗುತ್ತಿರುವ ಬೃಹತ್ ಪ್ಲಾಸ್ಟಿಕ್ ಕಸ ನಿರ್ವಹಿಸಲು ನಾವು ಸನ್ನದ್ಧವಾಗಿದ್ದೇವೆಯೆ? ಈ ಸಮಸ್ಯೆಯನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಅದರ ರಾಜ್ಯ ಘಟಕಗಳು ಹೇಗೆ ನಿರ್ವಹಣೆ ಮಾಡುತ್ತಿವೆ? ಈ ಬಗ್ಗೆ ನಾಲ್ಕು ವಾರಗಳಲ್ಲೇ ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕು ಎಂದು ಸುಪ್ರೀಂಕೋರ್ಟ್ ಏಪ್ರಿಲ್ 3ರಂದು ತಾಕೀತು ಮಾಡಿದೆ. ಈ ಸಂಬಂಧದಲ್ಲಿ ಬೆಂಗಳೂರೂ ಸೇರಿದಂತೆ ದೆಹಲಿ, ಚೆನ್ನೈ, ಆಗ್ರಾ, ಜೈಪುರ ಹಾಗೂ ಫರೀದಾಬಾದ್‌ಗಳ ಮುನಿಸಿಪಲ್ ಸಂಸ್ಥೆಗಳಿಗೆ ನೋಟಿಸ್‌ಗಳನ್ನೂ ನೀಡಲಾಗಿದೆ.

ಪ್ಲಾಸ್ಟಿಕ್ ತ್ಯಾಜ್ಯಗಳ ರಾಶಿ ನಾನಾ ರೂಪಗಳಲ್ಲಿ ನಮ್ಮ ನಗರಗಳ ರಸ್ತೆಬದಿಗಳಲ್ಲಿ ಕಾಣ ಸಿಗುವುದು ಮಾಮೂಲು. ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೋರ್ಟ್‌ಗೆ ನೀಡಿರುವ ಮಾಹಿತಿಯ ಪ್ರಕಾರ, ಭಾರತ ವಾರ್ಷಿಕ 56 ಲಕ್ಷ ಟನ್ ಪ್ಲಾಸ್ಟಿಕ್ ಕಸವನ್ನು ಉತ್ಪಾದಿಸುತ್ತದೆ. ದೆಹಲಿಯೊಂದರಲ್ಲೇ ದಿನನಿತ್ಯ ಉತ್ಪತ್ತಿಯಾಗುವ ಪ್ಲಾಸ್ಟಿಕ್ ಕಸ 690 ಟನ್. ನಮ್ಮ ಬೆಂಗಳೂರಿನಲ್ಲೂ ದಿನನಿತ್ಯ 314 ಟನ್ ಪ್ಲಾಸ್ಟಿಕ್ ಕಸ ಉತ್ಪತ್ತಿಯಾಗುತ್ತದೆ. ಇತರ ಮೆಟ್ರೊ ನಗರಗಳ ಪೈಕಿ ಚೆನ್ನೈ 429, ಕೋಲ್ಕತ್ತಾ 426 ಹಾಗೂ ಮುಂಬೈ 408 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ದಿನನಿತ್ಯ ಉತ್ಪಾದಿಸುತ್ತಿವೆ. ಆದರೆ ಈ ತ್ಯಾಜ್ಯಗಳ ನಿರ್ವಹಣೆ ಸಮರ್ಪಕವಾಗಿದೆಯೇ? ಸುಪ್ರೀಂಕೋರ್ಟ್ ಕೇಳಿರುವ ಪ್ರಶ್ನೆ ಇದೇ.


ರಾಷ್ಟ್ರದಲ್ಲಿ ದಿನ ನಿತ್ಯ ಸಂಗ್ರಹಿಸಿ ಮರುಬಳಕೆಯಾಗುತ್ತಿರುವ ಪ್ಲಾಸ್ಟಿಕ್‌ನ ಒಟ್ಟು ಪ್ರಮಾಣ ಸುಮಾರು 9205 ಟನ್. ಇದು ಒಟ್ಟು ಪ್ಲಾಸ್ಟಿಕ್ ತ್ಯಾಜ್ಯದಲ್ಲಿ ಸುಮಾರು ಶೇಕಡಾ 60ರಷ್ಟಾಗುತ್ತದೆ ಅಷ್ಟೆ. ಆದರೆ ಉಳಿದ 6137 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ದಿನನಿತ್ಯ ಸಂಗ್ರಹವಾಗದೆ ಬೀದಿಬೀದಿಗಳಲ್ಲಿ ತಿಪ್ಪೆಯಾಗಿರುತ್ತದೆ. ಈ ಕುರಿತು ನ್ಯಾಯಮೂರ್ತಿಗಳಾದ ಜಿ.ಎಸ್. ಸಾಂಘ್ವಿ ಹಾಗೂ ಕುರಿಯನ್ ಜೋಸೆಫ್ ಅವರನ್ನೊಳಗೊಂಡ ಸುಪ್ರೀಂಕೋರ್ಟ್ ಪೀಠ ತೀವ್ರ ಅಸಮಾಧಾನ ವ್ಯಕ್ತ ಪಡಿಸಿದೆ. ಇದು 'ತಳ ಮಟ್ಟದಲ್ಲಿನ ಆಡಳಿತದ ವೈಫಲ್ಯ' ಎಂದು ಟೀಕಿಸಿದೆ. 'ಈಗಾಗಲೇ ರೂಪಿಸಲಾಗಿರುವ ನೀತಿ, ನಿಯಮಾವಳಿಗಳೂ ಅನುಷ್ಠಾನಗೊಳ್ಳುತ್ತಿಲ್ಲ. ಇದಕ್ಕೆ ಹೊಣೆ ಯಾರು? ಕಸ ನಿರ್ವಹಣೆಯನ್ನೂ ನ್ಯಾಯಾಲಯ ನಿರ್ಧರಿಸಬೇಕೆ?' ಎಂದಿರುವ ಕೋರ್ಟ್‌ನ ಆಕ್ರೋಶ ಅರ್ಥವಾಗುವಂತಹದ್ದು.

2011ರ ಮಾರ್ಚ್‌ನಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ಮಾರ್ಗದರ್ಶಿ ಸೂತ್ರದ ಅನ್ವಯ ಗುಟ್ಕಾ ಇತ್ಯಾದಿಗಳನ್ನು ಮಾರಾಟ ಮಾಡಲಾಗುತ್ತಿದ್ದ ಪ್ಲಾಸ್ಟಿಕ್ ಪೊಟ್ಟಣಗಳನ್ನು ಬಹಿಷ್ಕರಿಸಲಾಗಿತ್ತು. ಇದೇ ರೀತಿ, 2009ರಲ್ಲಿ ಪ್ಲಾಸ್ಟಿಕ್ ನಿರ್ವಹಣೆ ಹಾಗೂ ವಿಲೇವಾರಿ ನಿಯಮಾವಳಿಗಳನ್ನು ರೂಪಿಸಲಾಗಿದ್ದರೂ ಪರಿಣಾಮ ಮಾತ್ರ ಶೂನ್ಯ.

ಪ್ಲಾಸ್ಟಿಕ್ ಚೀಲಗಳ ಅನಿಯಂತ್ರಿತ ಬಳಕೆಯಲ್ಲದೆ ಅಡ್ಡಾದಿಡ್ಡಿ ಬಿಸಾಕುವುದು ಹಾಗೂ ಅನಿಯಂತ್ರಿತ ವಿಲೇವಾರಿ ಕ್ರಮಗಳಿಂದಾಗಿ ಕೆರೆಕಟ್ಟೆಗಳು ಹಾಗೂ ನಗರಗಳ ಒಳಚರಂಡಿಗಳು, ಮೋರಿಗಳು ಕಟ್ಟಿಕೊಳ್ಳುವುದು ಮಾಮೂಲು. ಉಳಿದುಳಿದ ಆಹಾರವನ್ನು ಪ್ಲಾಸ್ಟಿಕ್‌ಚೀಲಗಳಲ್ಲಿ ಹಾಕಿ ಕಸದ ತೊಟ್ಟಿಗಳಲ್ಲಿ ಎಸೆಯುವ ಪ್ರವೃತ್ತಿ ಜನಸಾಮಾನ್ಯರಲ್ಲಿದೆ. ಇಂತಹ ತೊಟ್ಟಿಗಳಲ್ಲಿ ಬಾಯಿ ಹಾಕುವ ಹಸುಗಳ ಹೊಟ್ಟೆಗಳನ್ನು ಸೇರುವ ಪ್ಲಾಸ್ಟಿಕ್ ಮತ್ತಷ್ಟು ಸಂಕಟಗಳಿಗೆ ಕಾರಣವಾಗುತ್ತದೆ. ಪ್ರಾಣಿಗಳಿಗಷ್ಟೇ ಅಲ್ಲ ಹೈನು ಉತ್ಪನ್ನಗಳ ಮೂಲಕ ಮಾನವ ಆಹಾರ ಸರಪಳಿಗೆ ಪ್ಲಾಸ್ಟಿಕ್ ಅವಶೇಷಗಳು ಸೇರ್ಪಡೆಯಾಗುವುದು ಆತಂಕಕಾರಿ. ಹೀಗಾಗಿ ಪರಿಸರ ಮಾತ್ರವಲ್ಲ, ಮನುಕುಲದ ಭವಿಷ್ಯಕ್ಕೂ ಪ್ಲಾಸ್ಟಿಕ್ ದೊಡ್ಡ ಬೆದರಿಕೆಯಾಗುತ್ತಿದೆ ಎಂಬುದನ್ನು ಸಮಾಜ ಹಾಗೂ ಆಳುವ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. 2006ರ ಮುಂಬೈ ಮಹಾಮಳೆಯನ್ನು ನೆನಪಿಸಿಕೊಳ್ಳಿ. ಪ್ಲಾಸ್ಟಿಕ್‌ಚೀಲಗಳಿಂದ ಕಟ್ಟಿಕೊಂಡ ಚರಂಡಿಗಳನ್ನು ಕಂಡು ಪ್ಲಾಸ್ಟಿಕ್ ಬಹಿಷ್ಕರಿಸುವ ವಿಚಾರ ಭಾರಿ ಚರ್ಚೆಯಾಗಿತ್ತು ಆಗ.

ನಿಜಕ್ಕೂ ಪ್ಲಾಸ್ಟಿಕ್ ಬಹಿಷ್ಕಾರ, ಈ ಸಮಸ್ಯೆಗೆ ಉತ್ತರವಾಗಲಾರದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು, ಮರು ಬಳಸುವುದು ಹಾಗೂ ಪುನರ್ನವೀಕರಿಸುವ ವಿಚಾರಗಳು ಬಹುಶಃ ಹೆಚ್ಚು ವಾಸ್ತವಿಕವಾದ ಉತ್ತರಗಳಾಗಬಹುದು. ಈ ಬಗ್ಗೆ ಜಾಗೃತಿ ಅಗತ್ಯ. ಯೂರೋಪ್‌ನಲ್ಲಿ ಪ್ಲಾಸ್ಟಿಕ್ ಸಂಗ್ರಹದ ಹೊಣೆಗಾರಿಕೆಯನ್ನು ಪ್ಲಾಸ್ಟಿಕ್ ಉದ್ಯಮಕ್ಕೆ ಕಡ್ಡಾಯವಾಗಿಸಲಾಗಿದೆ. ಆದರೆ ಭಾರತದಲ್ಲಿ ಈ ಪರಿಸ್ಥಿತಿ ಇಲ್ಲ. ಹೀಗಾಗಿ, ಕನಿಷ್ಠ ಸರ್ಕಾರ, ಬಳಕೆದಾರರು ಹಾಗೂ ತಯಾರಕರು ಒಟ್ಟಾಗಿ ಸಮನ್ವಯದ ಕಾರ್ಯಯೋಜನೆಗಳಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅನಿವಾರ್ಯ.

■ ಸಿ.ಜಿ. ಮಂಜುಳಾ




ಈಶ್ವರ್